ಕರ್ನಾಟಕ ವಿಧಾನ ಸಭೆ

ಮಂಗಳವಾರ 21ನೇ ಮಾರ್ಚ್ 2000ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ 12.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ.ವೆಂಕಟಪ್ಪ) ಅವರು ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಜಗನ್ನಾಥಶೆಟ್ಟಿ ಹಾಗೂ ರಾಮಚಂದ್ರಯ್ಯರವರುಗಳ ಆಯೋಗದ ವರದಿಗಳನ್ನು ಸದನದಲ್ಲಿ ಮಂಡಿಸಲು ಹಾಗೂ ಶಾಸಕರಾಗಿದ್ದ ಶ್ರೀ ಆಸ್ನೋಟಿಕರ್‌ರವರ ಹತ್ಯೆ ಕುರಿತು ಸಿ.ಬಿ.ಐ. ತನಿಖೆಗೆ ಒತ್ತಾಯ.

+ ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಸಭಾಧ್ಯಕ್ಷರೇ, ಪ್ರತಿಪಕ್ಷದ ನಾಯಕರು ಮತ್ತು ಅವರ ಪಕ್ಷದ ಸದಸ್ಯರುಗಳ ಭಾವನೆಗಳನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಅವರ ಅನಿಸಿಕೆಗಳಿಗೆ ಸಾಕಷ್ಟು ಸ್ಪಷ್ಟನೆಗಳನ್ನು ನಿನ್ನೆ ಅವರು ನೀಡಿದ್ದಾರೆ. ನಾನು ಅವರಲ್ಲಿ ಪುನಃ ಮನವಿ ಮಾಡುತ್ತೇನೆ. ಸಂಸದೀಯ ನಡವಳಿಕೆಗಳಂತೆ ಸಭೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಎರಡು ಎನ್‌ಕ್ವೈರಿ ಕಮಿಷನ್‌ಗಳ ವರದಿಗಳು ಏನಿವೆ, ಈ ವರದಿಗಳನ್ನು ಸಭೆಯ ಮುಂದೆ ಇಡಬೇಕು ಎನ್ನುವಂಥಾದ್ದು ಅವರ ಮೊದಲನೆಯ ಅತ್ಯಂತ ಅಮೂಲ್ಯವಾದಂಥ ಒತ್ತಾಯ. ನಾನು ಅವರಲ್ಲಿ ಮನವಿ ಮಾಡತಕ್ಕಂಥಾದ್ದು ಏನೆಂದರೆ ಅದನ್ನು ಮಂತ್ರಾಲೋಚನಾ ಸಭೆಯಲ್ಲಿ ಪರ್ಯಾಲೋಚಿಸಿ ಈ ಅಧಿವೇಶನ ಮುಗಿಯುವುದರೊಳಗೆ ಆ ಎರಡು ವರದಿಗಳನ್ನು ಸದನದಲ್ಲಿ ಇಡುವುದಕ್ಕೆ ಮುನ್ನ ಅವರ ಜೊತೆಯಲ್ಲಿ ಚರ್ಚೆ ಮಾಡಿ ಸದನದಲ್ಲಿ ಇಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದು ಅವರಲ್ಲಿ ಹೇಳಿ ಅವರು ಈ ಒಂದು ವಿಚಾರದಲ್ಲಿ ನಮ್ಮ ಮೇಲೆ ಯಾವ ಶಂಕೆಯನ್ನೂ ಇಟ್ಟುಕೊಳ್ಳದೆ, ಸಭೆ ನಡೆಯುವುದಕ್ಕೆ ಸುಮಧುರವಾದ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ಹೇಳಿ ನಾನು ಮಾನ್ಯ ನಾಯಕರಲ್ಲಿ ಮತ್ತು ಸದಸ್ಯರಲ್ಲಿ ಮನವಿ ಮಾಡುತ್ತೇನೆ.

+ ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಅಧ್ಯಕ್ಷರೇ, ಈಗಾಗಲೇ ನಮ್ಮ ಕಾನೂನು ಮಂತ್ರಿಗಳು ಸದನದಲ್ಲಿ ಈ ಅಧಿವೇಶನ ಮುಗಿಯುವುದಕ್ಕೆ ಮುಂಚಿತವಾಗಿ ಜಗನ್ನಾಥಶೆಟ್ಟಿ ಆಯೋಗದ ವರದಿಯನ್ನು ಮತ್ತು ರಾಮಚಂದ್ರಯ್ಯ ಆಯೋಗದ

ವರದಿಯನ್ನು ಮಂಡಿಸುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಅದಕ್ಕೆ ನಮ್ಮ ಧನ್ಯವಾದಗಳು. ಆದರೆ, ಇನ್ನೊಂದು ಭಾಗ, ಅಷ್ಟೇ ಪ್ರಮುಖವಾದುದು ಇನ್ನೂ ಬಾಕಿ ಉಳಿದಿದೆ. ಅದರ ಬಗ್ಗೆ ಸರ್ಕಾರ ಯಾವುದೇ ಪ್ರಸ್ತಾಪಗಳನ್ನು ಮಾಡುತ್ತಾ ಇಲ್ಲ. ನನ್ನ ಮನಸ್ಸಿಗೊಂದು ಸಂಶಯ ಅನಿಸುತ್ತಿದೆ. ನಿನ್ನೆ, ಮೊನ್ನೆ ಕೋಲಾರದಲ್ಲಿ ನಡೆದಂಥ ಘಟನೆಯಲ್ಲಿ ಸರ್ಕಾರ ಭಾರಿ ಗಂಭೀರವಾಗಿ ಪರಿಗಣನೆಗೆ ತೆಗೆದುಕೊಂಡಿದೆ ಎಂದು ಹೇಳುವಂಥ ಹಿನ್ನೆಲೆಯಲ್ಲಿ ತಕ್ಷಣವೇ ಅದನ್ನು ಸಿ.ಬಿ.ಐ.ಗೆ ಹಸ್ತಾಂತರ ಮಾಡಲಿಕ್ಕೆ ಒಪ್ಪಿಗೆಯನ್ನು ಕೊಟ್ಟಿದೆ. ನಾವು ಕೂಡ ಸಂತೋಷಪಟ್ಟಿದ್ದೇವೆ. ಅವರಿಗೆ ಅದಕ್ಕೆ ಧನ್ಯವಾದಗಳನ್ನು ಕೂಡ ಅರ್ಪಿಸಿದ್ದೇವೆ. ಅದಕ್ಕಿಂತಲೂ ಗಂಭೀರವಾದಂಥ ಘಟನೆ ಇದು. ಬಹುಶಃ ಅದರಲ್ಲಿ ರಾಜಕೀಯ ಪ್ರೇರಿತ ವಿಚಾರಗಳು ಮತ್ತೊಂದು ಇದೆ ಎಂದು ಹೇಳಿದಾಗ ಇರಬಹುದು, ಅದಕ್ಕೆ ನಾವು ಸಿ.ಬಿ.ಐ.ಗೆ ರೆಫರ್ ಮಾಡಲಿಕ್ಕೆ ತಯಾರಿದ್ದೇವೆಂದು ಹೇಳಿದರು. ಆದರೆ, ಇದನ್ನು ನಿನ್ನೆಯಿಂದ ಪ್ರತಿಪಾದನೆ ಮಾಡುತ್ತಾ ಬರುತ್ತಿದ್ದೇವೆ. ಪ್ರಾಯಶಃ ಅದಕ್ಕಿಂತ ಹೆಚ್ಚಿನ ರಾಜಕೀಕರಣದ ವ್ಯವಸ್ಥೆ ಇದರಲ್ಲಿದೆ ಎಂಬ ಹಿನ್ನೆಲೆಯಲ್ಲಿ, ಎಲ್ಲಾ ಅವ್ಯವಸ್ಥೆಯ ಹಗರಣವಾದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಯಾವುದೇ ಒಂದು ತನಿಖೆಯ ವಿಭಾಗ ಅತ್ಯಂತ ಯಶಸ್ವಿಯಾಗಿ ಇದನ್ನು ಪತ್ತೆ ಹಚ್ಚುವುದಕ್ಕೆ ಸಾಧ್ಯವಿಲ್ಲ. ನಿಜವಾದ ಅಪರಾಧಿಗಳನ್ನು ಕಂಡುಹಿಡಿಯಲು ಸಾಧ್ಯವಿಲ್ಲ ಎಂದು ಹೇಳುವಂಥ ಹಿನ್ನೆಲೆಯಿಂದಲೇ ಇದನ್ನು ಸಿ.ಬಿ.ಐ.ಗೆ ಹಸ್ತಾಂತರಮಾಡಬೇಕೆಂದು ಹೇಳಿದ್ದೇವೆ. ಈಗಾಗಲೇ ಹೇಳುವಂಥಾದ್ದನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸುಮಾರು 80 ಪರ್ಸೆಂಟ್ 90 ಪರ್ಸೆಂಟ್ ಇದರಲ್ಲಿ ನಾವು ಯಶಸ್ವಿಯಾಗಿದ್ದೇವೆ ಎಂದು. ಪ್ರಾಯಶಃ ಪ್ರಥಮ ದಿನದಲ್ಲೇ 80 ಪರ್ಸೆಂಟ್ ಯಶಸ್ವಿಯಾಗಿದ್ದೇವೆ, 24 ಗಂಟೆಗಳಲ್ಲಿ ನಾವು ಪತ್ತೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದರ ನಂತರದ ಬೆಳವಣಿಗೆಯನ್ನು ಕೂಡ ಬೇರೆ ಬೇರೆ ಪತ್ರಿಕೆಗಳಲ್ಲಿ ಮತ್ತು ಬೇರೆ ಬೇರೆ ವಿಚಾರಗಳನ್ನು ತಿಳಿದುಕೊಂಡಾಗ ಅತ್ಯಂತ ಪ್ರಮುಖ ರಾಜಕೀಯ ಹಿನ್ನೆಲೆಯಲ್ಲೇ ಈ ನಿಗೂಢ ವ್ಯವಸ್ಥೆ ನಡೆದಿದೆ ಎಂದು ಹೇಳುವುದು ಕೂಡ ನಮಗೆ ಬಂದಿದೆ. ಈ ಹಿನ್ನೆಲೆಯಲ್ಲಿ ನಮಗನಿಸುತ್ತಾ ಇರುವಂಥಾದ್ದು, ಎಷ್ಟರಮಟ್ಟಿಗೆ ಇದರಲ್ಲಿ ರಾಜಕೀಯ ಒತ್ತಡದಿಂದ ಸಿ.ಒ.ಡಿಯಿಂದಲೇ ನಡೆಯಬೇಕೆಂಬ ಅವರ ಹಠ ಉಂಟು ಬಹುಶಃ ಅಷ್ಟರಮಟ್ಟಿಗೆ ಇದರಲ್ಲಿ ನಿಜವಾದ ಅಪರಾಧಿಗಳನ್ನು ಪತ್ತೆಹಚ್ಚುವುದಕ್ಕೆ ಸಾಧ್ಯವಿಲ್ಲ. ಎಲ್ಲಿಂದ ಶುರುವಾಗಿದೆ ಅಂದರೆ ಆ ಡಾಕ್ ವರ್ಕ್ಸ್ ಯೂನಿಯನ್ ವ್ಯವಸ್ಥೆಯಿಂದಲೇ ಇದು ಪ್ರಾರಂಭವಾಗಿದೆ. ಅನಂತರ ಹಂತ ಹಂತವಾಗಿ ಅಲ್ಲಿರುವಂಥ ರಾಜಕೀಯ ವ್ಯವಸ್ಥೆಗೆ ಬಂದಿದೆ. ಅದರ ನಂತರ ಬೇರೆ ಬೇರೆ ಜನ ತಮ್ಮ ಪಕ್ಷದಲ್ಲಿದ್ದವರೇ ಬೇರೆ ಪಕ್ಷಕ್ಕೆ ನಮ್ಮ ಪಕ್ಷದಿಂದ ಹೊರಗೆ ಹೋಗಿದ್ದಾರೆ, ನಮ್ಮ ಪಕ್ಷದ ವಿರುದ್ಧವಾಗಿ ಪ್ರಚಾರ ಮಾಡಿದ್ದಾರೆ ಎಂದು ಹೇಳುವಂಥ ಭಾವನೆಗಳು. ಒಂದು ದಿನ ನಮ್ಮ ಸಹೋದ್ಯೋಗಿಯನ್ನು ಕಳೆದುಕೊಳ್ಳುವಂಥ ದುರ್ದೈವದ ಸಂಕಟ ನಮಗೆ

ಬಂದಿದೆ. ಇದರ ಎಲ್ಲಾ ಹಿನ್ನೆಲೆಯಿಂದಲೂ ಹೊರ ಬರಬೇಕೆಂದಾದರೆ ಪ್ರಾಯಶಃ ಇಲ್ಲಿರುವಂಥ ಹಲವಾರು ಒತ್ತಡಗಳು, ಈ ರಾಜ್ಯದ್ದೇ ಅಲ್ಲ, ಬೇರೆ ರಾಜ್ಯದ ಒತ್ತಡಗಳೂ ಇವೆಯೆಂಬುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಅದು ಎಷ್ಟರಮಟ್ಟಿಗೆ ಸತ್ಯಾಸತ್ಯತೆಯಿಂದ ಕೂಡಿದೆ ಎಂಬುದರ ಅರಿವು ನಮಗೆ ಇಲ್ಲ. ಆದರೆ, ಆ ಸತ್ಯಾಸತ್ಯತೆ ಹೊರಗಡೆ ಬರಬೇಕೆಂದರೆ, ವಿಶಿಷ್ಟವಾದಂಥ ಒಂದು ತನಿಖೆ ನಡೆಯಬೇಕೇ ಹೊರತು ಕೇವಲ ಒತ್ತಡದ ಆಧಾರದಲ್ಲಿ ಇದನ್ನು ನಡೆಸಿದರೆ, ಅದು ಸಾಧ್ಯವಾಗುವುದಿಲ್ಲ. ಈಗಾಗಲೇ ನಮಗೆ ತಿಳಿದಮಟ್ಟಿಗೆ ಯಾರು ಪ್ರಮುಖ ಆರೋಪಿ ಇದ್ದಾರೆ ಅವರು ದೇಶವನ್ನು ಬಿಟ್ಟು ಹೋಗುವಂಥ ಸಂದರ್ಭಗಳು ಕೂಡ ಆದುದನ್ನು ನಾವು ನೋಡಿದ್ದೇವೆ. 4 ದಿವಸಗಳು ಕಳೆದ ಮೇಲೆ ಹೋಗಿದ್ದಾರೆಂದು ಹೇಳುವುದನ್ನು ಕೂಡ ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಹಾಗಾದರೆ ಈ ತನಿಖಾ ತಂಡ ಎಷ್ಟರಮಟ್ಟಿಗೆ ಯಶಸ್ವಿಯಾಗಿ ಕೆಲಸವನ್ನು ಮಾಡಿದೆ ಎಂಬುದನ್ನು ನಾವು ಆಲೋಚನೆ ಮಾಡಬೇಕಾದ ಅವಶ್ಯಕತೆ ಇದೆ. ಬಹುಶಃ ಈ ಎಲ್ಲಾ ವ್ಯವಸ್ಥೆಗೆ ಒಂದು ಇತಿಶ್ರೀ ಹಾಡಬೇಕೆಂದರೆ ಬಹುಶಃ ಸಿ.ಬಿ.ಐ.ನಿಂದ ಮಾತ್ರ ಸಾಧ್ಯ. ಆದಕಾರಣ ಒಂದು ಭಾಗ ಈಗಾಗಲೇ ಸರ್ಕಾರ ಆ ಆಯೋಗದ ವರದಿಯನ್ನು ಮಂಡನೆ ಮಾಡುತ್ತೇವೆಂದು ಹೇಳಿದೆಯೋ ಅದೇ ರೀತಿ ಇದನ್ನೂ ಕೂಡ ಹೇಳಬೇಕು. ಹೇಗೆ ಮೊನ್ನೆಯ ಕೋಲಾರದ ಘಟನೆಗೆ ತಕ್ಷಣವಾಗಿ ಸ್ಪಂದನ ಮಾಡಿ ಯಶಸ್ವಿಯಾಗಿ ಎಲ್ಲಾ ವಿಚಾರಗಳೂ ಪಾರದರ್ಶಕವಾಗಿ ಹೊರಗೆ ಬರಬೇಕು ಎಂದು ಆಲೋಚನೆ ಮಾಡಿದೆ. ಅದೇರೀತಿಯಾಗಿ ಇದರಲ್ಲೂ ಕೂಡ ಈ ರಾಜಕೀಕರಣದ ವ್ಯವಸ್ಥೆಯನ್ನು ಹೊರಗೆ ತರುವಂಥ ಕೆಲಸ ಆಗಲಿ, ಇದು ಗೊತ್ತಾಗಲಿ. ಏಕೆಂದರೆ, ಕಾಣದ ಕೈಗಳು ಉಂಟಲ್ಲ, ಅವುಗಳನ್ನು ನಾವು ತಕ್ಷಣ ತುಂಡು ಮಾಡಬೇಕು. ಈ ಕಾಣದ ಕೈಗಳ ವ್ಯವಸ್ಥೆಯನ್ನು ತುಂಡು ಮಾಡಿದರೆ ಮಾತ್ರ ನಮ್ಮ ಮುಂದಿನ ಕೆಲಸಗಳು ಯಶಸ್ವಿಯಾಗುತ್ತದೆ. ಇಲ್ಲದಿದ್ದರೆ, ಇದರಲ್ಲಿ ನಾವು ಕೇವಲ ತನಿಖೆ ಮಾಡಿ ಯಾರೋ ಎರಡು ಅಪರಾಧಿಗಳನ್ನು ಪತ್ತೆ ಹಚ್ಚಿ ಅವರನ್ನು ಎದುರು ಭಾಗದಲ್ಲಿ ನಿಲ್ಲಿಸಿದರೆ ಬಹುಶಃ ನಾಳೆ ಆ ಕಾಣದ ಕೈಗಳು ಇನ್ನಷ್ಟು ಕೆಲಸ ಮಾಡುವಂಥ ಪ್ರಯತ್ನ ಆಗಬಹುದು. ಅದಕ್ಕಾಗಿ, ಇದನ್ನು ಈ ರಾಜ್ಯದ ಯಾವುದೇ ತನಿಖಾ ತಂಡಗಳು ಮಾಡಿದರೂ, ಕೂಡ ವಿವಿಧ ರೀತಿಯ ಒತ್ತಡಗಳು ಇದರಲ್ಲಿ ಬರುವಂಥ ಸಂದರ್ಭಗಳಾಗುತ್ತವೆ. ನಿನ್ನೆ ಕೂಡ ಸಾಕಷ್ಟು ಜಿಜ್ಞಾಸೆಗಳು ನಡೆದಿದೆ. ಮಾತುಕತೆಗಳಲ್ಲಿ ಮತ್ತೊಂದರಲ್ಲಿ ಸಾಕಷ್ಟು ಜಿಜ್ಞಾಸೆಗಳು ನಡೆದಿವೆ. ಎರಡನೆಯದಾಗಿ ನನ್ನ ಮನಸ್ಸಿಗೆ ಅನಿಸುವಂತಾದ್ದು ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲವೆಂಬ ಆರೋಪ. ನಿನ್ನೆ ಇದನ್ನೆಲ್ಲಾ ಮಾತನಾಡುವಾಗ ಈ ಘಟನೆಯನ್ನು ನಮ್ಮ ಕಾಡುಗಳ್ಳ ವೀರಪ್ಪನ್ ಜೊತೆ ಹೋಲಿಸುವಂಥಾದ್ದು ಆಯೋಗದ ವರದಿಯನ್ನು ಮಂಡನೆ ಮಾಡಿ ಎಂದು ಹೇಳುವಾಗ, ಮೇಲ್ಮನೆಯಲ್ಲಿದ್ದಂಥ ನಾಣಯ್ಯನವರನ್ನು ಕರೆಸುತ್ತೇನೆ. ಅವರ ಜೊತೆ ಮಾತಾಡಿ ಮತ್ತೆ ನೋಡೋಣ ಎಂದು

ಹೇಳುವಂಥಾದ್ದು. ಈ ರೀತಿಯಲ್ಲಿ ಅತ್ಯಂತ ಗಂಭೀರವಾದ ವಿಚಾರವನ್ನು ಪರಿಗಣನೆ ಮಾಡದೇ ಸ್ವಲ್ಪ ಜಾರಿಸುವಂಥ ವ್ಯವಸ್ಥೆ ಮಾಡುವುದರಲ್ಲಿ ನನಗೆ ಮನಸ್ಸಿಗೆ ತುಂಬಾ ನೋವಾಗಿದೆ. ನಿಜವಾಗಿಯೂ ಈ ಘಟನೆಯ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ನಮ್ಮಲ್ಲಿ ತಪ್ಪಿರಬಹುದು; ನಮ್ಮ ಸದಸ್ಯರು ಯಾರಾದರೂ ಮಾತನಾಡುವುದರಲ್ಲಿ ಹೆಚ್ಚು ಕಡಿಮೆ ಇರಬಹುದು, ಇರಲಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಜವಾಬ್ದಾರಿ ಸ್ಥಾನದಲ್ಲಿದ್ದಂಥ ಮುಖ್ಯಮಂತ್ರಿಗಳು ಈ ವಿಚಾರವನ್ನು ನಾವು ಚರ್ಚೆ ಮಾಡುವಂಥ ಸಂದರ್ಭದಲ್ಲಿ ಕಾಡುಗಳ್ಳ ವೀರಪ್ಪನ್‌ನ್ನು ಹಿಡಿಯಲಿಕ್ಕೆ ಆಯಿತೇ, ಮತ್ತೊಬ್ಬರನ್ನು ಹಿಡಿಯಲಿಕ್ಕೆ ಆಯಿತೇ?....

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು): ಮಾನ್ಯ ಸದಾನಂದಗೌಡರು ನಾನು ಹೇಳಿದುದರ ಇಂಗಿತವನ್ನು ಅರ್ಥಮಾಡಿಕೊಳ್ಳಲಿಲ್ಲ. ಯಾವ ಸಂದರ್ಭದಲ್ಲಿ ನಾನು ವೀರಪ್ಪನ್‌ನ್ನು ಸದನಕ್ಕೆ ಕರೆದುಕೊಂಡು ಬಂದೆ ಎಂದು ಹೇಳಿದರೆ, ಇಂತಿಷ್ಟು ಕಾಲದಲ್ಲಿ ನೀವು ಅವನನ್ನು ಹಿಡಿದು ತರುತ್ತೀರಾ ಎಂಬ ಪ್ರಶ್ನೆ ಆ ಭಾಗದಿಂದ ಬಂತು. ಆಗ ಹೇಳಿದೆ, ವೀರಪ್ಪನ್‌ನ್ನು 48 ಗಂಟೆಯಲ್ಲಿ ಹಿಡಿಯುತ್ತೇನೆಂದು ಹೇಳಿದವರ ಕಥೆ ಏನಾಯಿತು ಎಂಬುದು ನಿಮಗೆ ಗೊತ್ತಿದೆಯಲ್ಲಾ. ಆದ್ದರಿಂದ ಅಂತಹ ಆಶ್ವಾಸನೆಯನ್ನು ಕೊಡಲಿಕ್ಕೆ ನನ್ನಿಂದ ಸಾಧ್ಯವಾಗಲಿಲ್ಲವೆಂದು ನನ್ನ ತಿಳುವಳಿಕೆ ಮಟ್ಟದಲ್ಲಿ ನಾನು ಹೇಳಿದೆ.

ಶ್ರೀ ಡಿ.ವಿ.ಸದಾನಂದಗೌಡ: ನಾನು ಆ ವೀರಪ್ಪನ್ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಏಕೆಂದರೆ, ಇಷ್ಟು ಗಂಟೆಯಲ್ಲಿ ಹಿಡಿಯುತ್ತೇನೆಂದು ಹೇಳಿದವರು ನಿಮ್ಮ ಕಡೆಯಲ್ಲೇ ಕುಳಿತುಕೊಂಡಿದ್ದಾರೆ. ಜವಾಬ್ದಾರಿಯುತ ಸ್ಥಾನದಲ್ಲಿ ಇದ್ದಾರೆ. ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಸ್.ಎಂ.ಕೃಷ್ಣ: ಬರೀ ಇಲ್ಲಿಯೇ ಅಲ್ಲ, ಅವರು ಎಲ್ಲಾ ಕಡೆಯೂ ಕುಳಿತಿದ್ದಾರೆ.

ಶ್ರೀ ಡಿ.ವಿ.ಸದಾನಂದಗೌಡ: ಆದರೂ ಕೂಡ ನಾನು ಅದರ ಬಗ್ಗೆ ಗಂಭೀರವಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ತಾವು ಅತ್ಯಂತ ಗಂಭೀರವಾಗಿ ದಲಿತರ ಹತ್ಯೆಯ ಬಗ್ಗೆ ಅತ್ಯಂತ ಶೀಘ್ರವಾಗಿ ವರದಿ ತರಿಸಬೇಕು. ನಮಗೆ ನಿಮ್ಮ ಮೇಲೆ ಎಷ್ಟು ವಿಶ್ವಾಸ ಇತ್ತು ಎಂದು ಹೇಳಿದರೆ ಈ ರೀತಿಯ ಪಾರದರ್ಶಕತನವನ್ನು ತೋರಿಸುವಂಥ ಒಂದು ವ್ಯವಸ್ಥೆಯನ್ನು ತಾವು ಅಷ್ಟು ಶೀಘ್ರವಾಗಿ ಕಂಬಾಲಪಲ್ಲಿಯ ಘಟನೆಯಲ್ಲಿ ಮಾಡಿದಿರಿ. ಆದರೆ, ಅದೇರೀತಿ ಇದರಲ್ಲಿ ತಮಗೆ ವಿಶ್ವಾಸವಿಲ್ಲ ಏಕೆ? ಆ ವಿಶ್ವಾಸವನ್ನು ಇದರಲ್ಲಿಯೂ ವ್ಯವಸ್ಥೆ ಮಾಡಿದರೆ ಬಹುಶಃ ಅತ್ಯಂತ ಯಶಸ್ವಿಯಾಗಿ ಇದನ್ನು

ಮಾಡಬಹುದು. ಕಾಣದ ಕೈಗಳ ಕೈವಾಡಕ್ಕೆ ಇವತ್ತು ಆರೋಪಿಗಳ ಬಂಧನವಾಗುವುದಕ್ಕಿಂತಲೂ ಪ್ರಮುಖ ಒತ್ತು ನಾವು ಕೊಡುವಂಥಾದ್ದು ಆಯೋಗದ ವರದಿಯನ್ನು ಮಂಡನೆ ಮಾಡುವುದಕ್ಕೆ ನಾವು ಹೇಳುವಂಥಾದ್ದು. ಇದನ್ನು ನಾವು ಏಕೆ ಹೇಳುವುದೆಂದರೆ, ಶಾಶ್ವತ ಪರಿಹಾರವನ್ನು ಕಂಡಕೊಳ್ಳಿ. ಈ ಚರ್ಚೆಯ ಆಧಾರದಲ್ಲಿ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯಬಾರದು. ಒಂದು ಶಾಶ್ವತ ಪರಿಹಾರ ಸಿಕ್ಕಬೇಕೆಂಬ ಮನಸ್ಸಿನ ಭಾವನೆಗೆ ಒತ್ತು ಕೊಟ್ಟು ನಾವು ಇಲ್ಲಿ ಚರ್ಚೆಯನ್ನು ಮಾಡುತ್ತೇವೆಯೇ ಹೊರತು ನಾನು ನಿನ್ನೆ ಹೇಳಿದ ರೀತಿಯಲ್ಲಿ ಎಷ್ಟೇ ಚರ್ಚೆ ಮಾಡಿದರೂ ಕೂಡ ಆಸ್ಫೋಟಿಕರ್ ಅವರನ್ನು ನಾವು ಪುನಃ ಕರೆದುಕೊಳ್ಳುವುದಕ್ಕಾಗುವುದಿಲ್ಲ. ಬರೀ ಆರೋಪಿಗಳನ್ನು ಪತ್ತೆ ಮಾಡಿ ಅವರಿಗೆ ಶಿಕ್ಷೆ ಕೊಟ್ಟ ಕೂಡಲೇ ಆ ಆಸ್ಫೋಟಿಕರ್ ನಮ್ಮ ಮುಂದೆ, ಇಲ್ಲಿ ಸದನದಲ್ಲಿ ಬಂದು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಆದರೆ, ಈ ಕಾಣದ ಕೈಗಳ ಕೈವಾಡ ಎಲ್ಲಾ ಜ್ವಲಂತ ಸಮಸ್ಯೆಗಳನ್ನು ಉದ್ಭವ ಮಾಡುತ್ತಾ ಇದೆ. ಈ ರೀತಿಯ ಕೊಲೆಗಳನ್ನು, ದುರಂತಗಳನ್ನು ನಿರ್ಮಾಣ ಮಾಡುತ್ತಾ ಇದೆ. ಕಾಣದ ಕೈಗಳ ವ್ಯವಸ್ಥೆಗಳಿಗೆ ಮತ್ತೆ ಒತ್ತು ಕೊಡುವ ಸಂಗತಿಗಳು ಆಗಬಾರದು ಎಂಬ ನನ್ನ ಅನಿಸಿಕೆಯಿಂದ ಈ ಮಾತುಗಳನ್ನು ಹೇಳಿದ್ದೇನೆಯೇ ಹೊರತು ಯಾವುದೇ ರೀತಿಯ ಆರೋಪಗಳನ್ನು ಮಾಡಬೇಕೆಂದು ಹೇಳುವಂಥ ವಿಶಿಷ್ಟ ವ್ಯವಸ್ಥೆಯಲ್ಲಿ ನಾನು ಈ ಮಾತುಗಳನ್ನು ಹೇಳಿಲ್ಲ. ಇನ್ನಾದರೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಇದರ ಹಿನ್ನೆಲೆ ತಮಗೆಲ್ಲರಿಗೂ ತಿಳಿದಿದೆ. ಈಗ ಕೂಡ ತಪ್ಪಿತಸ್ಥರು ತಪ್ಪಿಸಿಕೊಂಡು ಹೋಗುವಂಥ ಸಂದರ್ಭಗಳು, ತಪ್ಪಿತಸ್ಥರಿಗೆ ಬೆಂಬಲ ಕೊಟ್ಟಂಥ, ಕುಮ್ಮಕ್ಕು ಕೊಟ್ಟಂಥ ವ್ಯಕ್ತಿಗಳು ಪೂರ್ತಿಯಾಗಿ ಇದರಿಂದ ಹೊರ ಬರುವಂಥ ಸಂದರ್ಭಗಳು ಎಲ್ಲಾ ಇವೆ. ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಪಾರದರ್ಶಕವಾದಂಥ ವ್ಯವಸ್ಥೆಯಾಗಲಿ. ಎಲ್ಲಾ ರೀತಿಯಲ್ಲೂ ಕೂಡ ಆ ಕಾಣದ ಕೈವಾಡದ ವ್ಯವಸ್ಥೆಗಳು ಇನ್ನು ಮುಂದಕ್ಕೆ ಆಗದ ರೀತಿಯಲ್ಲಿ ಒಂದು ತನಿಖೆ, ಎಲ್ಲರನ್ನೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ದಯವಿಟ್ಟು ತಾವು ಇದನ್ನು ಸಿ.ಬಿ.ಐ.ಗೆ ಹಸ್ತಾಂತರ ಮಾಡಬೇಕೆಂದು ಮತ್ತೊಮ್ಮೆ ನಾನು ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ನಾನು ಅವರಿಗೆ ಸಾಕಷ್ಟು ವಿಚಾರಗಳನ್ನು ನಾಯಕರ ಪರವಾಗಿ ಇಲ್ಲಿ ಸ್ಪಷ್ಟೀಕರಿಸಿದ್ದೇನೆ. ಸರ್ಕಾರದ ನಿಲುವು, ಕಾರಣಗಳು ಮತ್ತು ಪರಿಹಾರ. ಒಂದು ವ್ಯತ್ಯಾಸವನ್ನು ನಾವು ಕೋಲಾರದಲ್ಲಿ ನಡೆದಿರತಕ್ಕ ಘಟನೆಗೂ ಮತ್ತು ಉತ್ತರ ಕರ್ನಾಟಕದಲ್ಲಿ ನಡೆದಂಥ ಗಲಭೆಗಳು ಇವುಗಳಲ್ಲಿರತಕ್ಕ ವ್ಯತ್ಯಾಸವನ್ನು ಅವರ ಗಮನಕ್ಕೆ ತರಲು ಪ್ರಯತ್ನ ಮಾಡುತ್ತೇನೆ. ಇದರಲ್ಲಿ ತನಿಖೆ

ಪ್ರಾರಂಭವಾಗಿರಲಿಲ್ಲ. ಅದರಲ್ಲಿ ತನಿಖೆ ಬಹಳ ಮುಂದುವರೆದು ಶೇಕಡ 90ರಷ್ಟು ತನಿಖೆ ಪೂರ್ಣವಾಗಿದೆ. ಈಗ ಆ ತನಿಖೆಯನ್ನು ಸಿ.ಓ.ಡಿಯಿಂದ ನಾವು ವಾಪಸ್ ತೆಗೆದುಕೊಂಡರೆ, ಪುನಃ ನಾವು ಪ್ರಾರಂಭದಿಂದ ತನಿಖೆ ಮಾಡಬೇಕಾಗುತ್ತದೆ. ನೀವು ಯಾವ ಸತ್ಯಶೋಧನೆ ಆಗಬೇಕೆಂದು ಇದ್ದೀರೋ ಆ ಸತ್ಯಶೋಧನೆಗೆ ಅಪಾಯ ಬರಬಹುದು ಎನ್ನುವಂಥಾದ್ದು ಬಹಳ ಮುಖ್ಯವಾದ ಕಾರಣವನ್ನು ತಮ್ಮ ಜೊತೆಗೆ ಚರ್ಚೆ ಮಾಡುವಾಗ ಹೇಳಿದ್ದೇವೆ. ಇದನ್ನು ನೀವೂ ಒಪ್ಪುತ್ತೀರಿ. ಎರಡನೆಯದು, ಆ ಕಾರಣಕ್ಕಾಗಿಯೇ ಮಾನ್ಯ ನಾಯಕರು ತಾವು ಕೇಳಿದ ಮೊದಲನೇ ಡಿಮ್ಯಾಂಡ್ ಏನಿತ್ತು, ಸಿ.ಬಿ.ಐ ಗೆ ರೆಫರ್ ಮಾಡಬೇಕೆಂಬುದನ್ನು ಕಂಬಾಲಪಲ್ಲಿಯಲ್ಲಿ ನಡೆದಿರತಕ್ಕ ಘಟನೆಗೆ ಯಾವ ಶಂಕೆಯೂ ಇಲ್ಲದೆ ಒಪ್ಪಿಕೊಂಡಿದ್ದಾರೆ. ಇಲ್ಲಿರತಕ್ಕಂಥ ಭಾಗಶಃ ಇಷ್ಟೆ, ಈಗ ಬಹಳ ಮುಂದುವರಿದಿರತಕ್ಕ ತನಿಖೆಯನ್ನು ಮತ್ತೆ ಹಿಂದೆ ತರತಕ್ಕ ಪ್ರಯತ್ನ ಮಾಡುವುದು ಅಥವಾ ಮಾಡುವುದರಿಂದ ಸತ್ಯಶೋಧನೆಯ ಕೆಲಸಕ್ಕೆ ತೊಂದರೆಯಾಗುತ್ತದೆ ಎಂಬ ಕಳಕಳಿಯನ್ನು ನಾನೇನು ಅಭಿವ್ಯಕ್ತ ಮಾಡಿದ್ದೇನೆ. ಆಗಬೇಕು, ಯಾರು ಆ ಕಾಣದ ಕೈಗಳು ಎಂಬುದನ್ನು ಕಂಡುಹಿಡಿಯಬೇಕೆಂದು ತಾವು ಹೇಳಿದ್ದೀರಿ. ಅವುಗಳನ್ನೆಲ್ಲಾ ಸಿ.ಓ.ಡಿ ತನಿಖೆಯಲ್ಲೂ ತರುವುದಕ್ಕೆ ಸಾಧ್ಯ ಇದೆ. ಸಾಧ್ಯ ಇಲ್ಲವೆಂಬ ಶಂಕೆ ತಮಗೇನಿದೆ ಆ ಶಂಕೆಯ ಪರಿಹಾರ ಮಾಡುವುದಕ್ಕೆ ವರದಿ ಬಂದಮೇಲೆ ನಿಮಗೆ ಗೊತ್ತಾಗುತ್ತದೆ. ಇದನ್ನು ಬಹಳ ಹೆಚ್ಚು ಮುಂದುವರಿಸುವುದರಿಂದ ತನಿಖೆಗೂ ತೊಂದರೆಯಾಗಬಹುದು ಎಂಬುದನ್ನು ನೀವೂ ಒಪ್ಪುತ್ತೀರಿ ಎಂದು ಭಾವನೆ ಮಾಡಿ ನಿಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡುತ್ತೇನೆ. ಇದನ್ನು ಯಾವುದೋ ಒಂದು ಪ್ರತಿಷ್ಠೆ ಎಂದು ಭಾವನೆ ಮಾಡದೇ ಇದು ಎಲ್ಲರ ಮನಸ್ಸಿನಲ್ಲಿರತಕ್ಕಂಥ ಈ ಶೋಧನೆಯ ಕೆಲಸಕ್ಕೆ ಸಹಕರಿಸಬೇಕೆಂದು ಹೇಳಿ, ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ ಹೋಗಬೇಕೆಂದು ಮತ್ತೊಮ್ಮೆ ಮನವಿ ಮಾಡುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ಮತ್ತೊಂದು ಕ್ಲಾರಿಫಿಕೇಶನ್ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಭಾರಿ ಮುಂದೆ ಹೋಗಿದ್ದೇವೆ, ಇನ್‌ವೆಸ್ಟಿಗೇಶನ್ ಏನು ಆಗಿದೆ ಯಾವ ಹಂತದಲ್ಲಿದೆ, ಎನ್ನುವುದನ್ನು ನಾವು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ, ಆ ಚರ್ಚೆಯ ಮೂಲಕ ಆ ಇನ್‌ವೆಸ್ಟಿಗೇಶನ್ ಅನ್ನು ಹ್ಯಾಂಪರ್ ಮಾಡುವುದಕ್ಕೆ ಉದ್ದೇಶ ನಮ್ಮ ಪಕ್ಷಕ್ಕಾಗಲಿ ಅಥವಾ ಮಾನ್ಯ ಸದಸ್ಯರು ಯಾರಿಗೂ ಇಲ್ಲ. ಆದರೆ ಒಂದು ಪ್ರಶ್ನೆ ಎಷ್ಟು ದಿವಸಗಳಲ್ಲಿ ಇದನ್ನು ಪೂರ್ತಿ ಮಾಡುತ್ತೀರಿ? ಏಕೆಂದರೆ ಕಳೆದ ಸದನದಲ್ಲಿ ತಾವು ಹೇಳಿದಿರಿ 8 ಗಂಟೆ, 24 ಗಂಟೆ ಒಂದು ದಿವಸ ನಾಲ್ಕು ದಿವಸ ಒಂದು ವಾರ ಎಂದು ಹೇಳಿದಿರಿ, ಅಧಿಕೃತವಾಗಿ ಆಡಳಿತ ಮಾಡುತ್ತಿರುವಂತಹ ಸಂದರ್ಭದಲ್ಲಿ ಮತ್ತು ಈ ಸದನದಲ್ಲಿ ಚರ್ಚೆ ಮಾಡುತ್ತಾ ಇರುವಂತಹ ಸಂದರ್ಭದಲ್ಲಿ ಸಿ.ಓ.ಡಿ ಮತಿಯಿಂದ ತನಿಖೆಯನ್ನು

ಎಷ್ಟು ದಿವಸಗಳಲ್ಲಿ ಮಾಡಿಸುತ್ತೀರಿ ಎನ್ನುವುದನ್ನು ಧೈರ್ಯವಾಗಿ ಹೇಳುವಂತಹ ಮನಸ್ಸು ಸರ್ಕಾರಕ್ಕೆ ಏಕೆ ಇಲ್ಲ. ಈ ಸದನ ಮುಗಿಯುವುದರೊಳಗೆ ನಾವು ಈ ವಿಷಯವನ್ನು ತೆಗೆದುಕೊಂಡು ಬರುತ್ತೇವೆ, ನಾವು ಆ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತೇವೆ, ಈ ರೀತಿ ಆಗಿದೆ ಎಂದು ತೋರಿಸಿಕೊಡುತ್ತೇವೆ ಎಂದು ಹೇಳುವಂತಹ ಎದೆಗಾರಿಕೆ ನಿಮ್ಮಲ್ಲಿ ಕಾಣುತ್ತಿಲ್ಲ. ಆ ರೀತಿಯ ಎದೆಗಾರಿಕೆಯನ್ನು ತೋರಿಸುವಂತಹ ಪ್ರಯತ್ನ ಸಹ ತಾವು ಮಾಡುತ್ತಿಲ್ಲ. ನಾವು ಯಾವುದೇ ರೀತಿಯಲ್ಲಿ ಇದನ್ನು ವೈಯಕ್ತಿವಾದ ಪ್ರಶ್ನೆಯನ್ನಾಗಿ ತೆಗೆದುಕೊಂಡಿಲ್ಲ. ಲೋಕಸಭೆಯಲ್ಲಿ ಆದಂತೆ ಈ ಸದನದ ಕಲಾಪವನ್ನು 8-10 ದಿವಸ ತಡೆಯಬೇಕು ಎನ್ನುವಂತಹ ಉದ್ದೇಶ ಕೂಡ ನಮ್ಮಲ್ಲಿ ಇಲ್ಲ. ನಮ್ಮ ಮನಸ್ಸಿನಲ್ಲಿರುವ ಕಾಳಜಿ ಮತ್ತು ಮುಂದಿನ ದಿನಗಳಲ್ಲಿ ಈ ಸರ್ಕಾರ ನಡೆಯಬೇಕಾದಂತಹ ದಾರಿ, ಸಮಾಜದಲ್ಲಿ ಇರುವ ಜನಗಳಿಗೆ ಸಿಗಬೇಕಾದಂತಹ ಭದ್ರತೆ, ಅದರ ಬಗ್ಗೆ ನಮ್ಮ ಚಿಂತನೆ ಇದೆಯೇ ಹೊರತು ವೈಯಕ್ತಿಕ ಪ್ರತಿಷ್ಠೆ ಮತ್ತೊಂದು ಅಲ್ಲ. ನನಗನಿಸುತ್ತಿದೆ ಸರ್ಕಾರವೇ ಇವತ್ತು ಪ್ರತಿಷ್ಠೆಗೆ ಅಂಟಿಕೊಂಡಿದೆ. ಪ್ರತಿಷ್ಠೆಯ ಆಧಾರದಲ್ಲಿ ಸರ್ಕಾರ ಇವತ್ತು ಇದನ್ನು ಮುಂದುವರಿಸುತ್ತಿದೆ ಎಂದು ನನ್ನ ಅನಿಸಿಕೆ. ತಾವು ಜವಾಬ್ದಾರಿಯಿಂದ ನುಣಚಿಕೊಳ್ಳುವಂತಹ ಪ್ರಯತ್ನ ಮಾಡಬಾರದು. ತಾವು ಸಿ.ಬಿ.ಐ ತನಿಖೆಗೆ ಒಪ್ಪಬೇಕೆಂದು ನಾನು ಆಗ್ರಹ ಮಾಡುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ ಪ್ರತಿಷ್ಠೆ ಇದ್ದಿದ್ದರೆ ಬಹುಶಃ ಕೋಲಾರ ಜಿಲ್ಲೆಯಲ್ಲಿ ನಡೆದ ಘಟನೆಯನ್ನು ಸಿ.ಬಿ.ಐ.ಗೆ ಒಪ್ಪಿಸುವುದಕ್ಕೆ ಸರ್ಕಾರ ಮುಕ್ತ ಮನಸ್ಸಿನಿಂದ ಒಪ್ಪಿಕೊಂಡಿರುವಂಥಾದ್ದನ್ನು ತಾವು ಗಮನಿಸಬೇಕಾಗಿತ್ತು ಮತ್ತು ಅಭಿನಂದನೆಗಳನ್ನು ಸಲ್ಲಿಸಿದ್ದೀರಿ. ನಾನು ಪುನಃ ಪುನಃ ತಮಗೆ ಹೇಳುತ್ತೇನೆ. ಎಷ್ಟು ಶೀಘ್ರವಾಗಿ ತನಿಖೆಯನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವೋ, ಅಷ್ಟು ಶೀಘ್ರವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ, ಜೊತೆಗೆ ಈ ಅಧಿವೇಶನ ಮುಗಿಯುವುದರೊಳಗೆ ಆ ಇನ್‌ವೆಸ್ಟಿಗೇಶನ್ ಯಾವ ಪ್ರಮಾಣದಲ್ಲಿ ಮುಂದುವರಿದಿದೆ ಎನ್ನತಕ್ಕಂಥಾದ್ದನ್ನು ಮತ್ತು ಇನ್‌ವೆಸ್ಟಿಗೇಶನ್‌ನ ಫಲಿತಾಂಶವನ್ನು ಈ ಸದನಕ್ಕೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವಂತಹ ಮಾತನ್ನು ಪುನಃ ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟನ್ನು ತಾವು ಒಪ್ಪಿಕೊಂಡು ತಾವು ತಮ್ಮ ತಮ್ಮ ಸ್ಥಳಗಳಿಗೆ ಹೋಗಬೇಕೆಂದು ನಾನು ಸರ್ಕಾರದ ವತಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. ತಾವು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಬೇಕು.

+ ಶ್ರೀ ಜಗದೀಶ್‌ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಮಾನ್ಯ ಚಂದ್ರೇಗೌಡರು ಈ ವಿಷಯದ ಬಗ್ಗೆ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದರು, ನಮ್ಮದು ಎರಡು ಪ್ರಮುಖವಾದ ಬೇಡಿಕೆಗಳು. ಮಾನ್ಯ ಸದಸ್ಯರಾದ ಆಸ್ನೋಟಿಕರ್ ಹತ್ಯೆಯ ಹಿನ್ನೆಲೆ ಏನು ಇದೆ ಅದರ ಬಗ್ಗೆ ಒಂದು ಸ್ಪಷ್ಟತೆ ಬರಬೇಕು, ಮತ್ತು ತೀವ್ರಗತಿಯಾದ ಒಂದು ಇನ್‌ವೆಸ್ಟಿಗೇಶನ್ ಅದರಲ್ಲಿ ಆಗಬೇಕು, ಮತ್ತು ಅದರಲ್ಲಿ ಕೆಲವೊಂದು ಅನುಮಾನಗಳು ಇವೆ. ಈ ಹತ್ಯೆಯ ಹಿನ್ನೆಲೆಯಲ್ಲಿ ಯಾರ್ಯಾರು ಇದ್ದಾರೆ, ಮತ್ತು ಬೇರೆ ಬೇರೆ ಕಾರಣಗಳು ಇರಬಹುದು ಮತ್ತು ಹಲವಾರು ಘಟನೆಗಳು ನಡೆದಿರುವಂಥಾದ್ದು, ಇವೆಲ್ಲವುಗಳು ಸಮಗ್ರವಾಗಿ ಒಂದು ತನಿಖೆಯಾಗಬೇಕು ಎನ್ನುವ ಒಂದು ದೃಷ್ಟಿ ಇಟ್ಟುಕೊಂಡು ನಾವು ಈ ಒಂದು ಸಿ.ಬಿ.ಐ. ತನಿಖೆಗೆ ಒತ್ತಾಯ ಮಾಡುತ್ತಿದ್ದೇವೆ. ಇದರಲ್ಲಿ ಯಾರ ಪಾತ್ರ ಎಷ್ಟು ಇದೆ ಎನ್ನುವುದು ಈ ಜಗತ್ತಿಗೆ ಗೊತ್ತಾಗಬೇಕು, ಎನ್ನುವ ದಿಸೆಯಲ್ಲಿ ನಾವು ಒತ್ತಾಯ ಮಾಡುತ್ತಿದ್ದೇವೆ. ಇವತ್ತು ಮಾನ್ಯ ಸಚಿವರಾದ ಚಂದ್ರೇಗೌಡರು ಹೇಳಿದರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ನಾವು ಒಂದು ಹಂತಕ್ಕೆ ಇನ್‌ವೆಸ್ಟಿಗೇಶನ್ ಮಾಡಿದ್ದೇವೆ. ಸಿ.ಒ.ಡಿಯಿಂದ 90 ಭಾಗದಷ್ಟು ಇನ್‌ವೆಸ್ಟಿಗೇಶನ್ ಆಗಿದೆ, ಇನ್ನು ಕೊನೆಯ ಹಂತದಲ್ಲಿದೆ ಎಂದು. ಆದರೆ ಮಾನ್ಯ ಸಚಿವರಾದ ಚಂದ್ರೇಗೌಡರು ಇನ್‌ವೆಸ್ಟಿಗೇಶನ್ ಮುಗಿಸಿ ಎಷ್ಟು ದಿವಸಗಳಲ್ಲಿ ಆರೋಪಿಗಳನ್ನು ಅರೆಸ್ಟ್ ಮಾಡುತ್ತೇವೆ ಮತ್ತು ಈ ಇನ್‌ವೆಸ್ಟಿಗೇಶನ್ ಅನ್ನು ಎಷ್ಟು ದಿವಸಗಳಲ್ಲಿ ಮುಗಿಸುತ್ತೇವೆ ಎನ್ನುವುದನ್ನು ಸ್ಪಷ್ಟೀಕರಣ ಮಾಡಲಿಲ್ಲ. ನಮ್ಮ ಮತ್ತೊಂದು ಬೇಡಿಕೆ ಏನೆಂದರೆ ನ್ಯಾಯಮೂರ್ತಿ ಜಗನ್ನಾಥಶೆಟ್ಟಿ ಆಯೋಗದ ವರದಿಯನ್ನು ಈ ಸದನದಲ್ಲಿ ಮಂಡನೆ ಮಾಡುವಂಥಾದ್ದು, ಅದಕ್ಕೂ ಸಹ ಮಾನ್ಯ ಮಂತ್ರಿಗಳು ಸ್ಪೆಸಿಫಿಕ್ ಆಗಿ ಸ್ಪಷ್ಟೀಕರಣ ಕೊಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಾನೂನು ಸಚಿವರು ಇಷ್ಟು ಅವಧಿಯೊಳಗೆ ಈ ವರದಿಯನ್ನು ಈ ಸದನದಲ್ಲಿ ಮಂಡನೆ ಮಾಡುತ್ತೇವೆ ಎನ್ನುವುದನ್ನು ಸ್ಪಷ್ಟೀಕರಣ ಮಾಡಲಿಲ್ಲ. ತಾವು ಈಗ ಒಂದು ಸ್ಪಷ್ಟೀಕರಣ ಕೊಡುವುದಕ್ಕೆ ಸಾಧ್ಯವಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಾನೂನು ಸಚಿವರು ನ್ಯಾಯಮೂರ್ತಿ ಜಗನ್ನಾಥಶೆಟ್ಟಿ ಆಯೋಗದ ವರದಿಯನ್ನು 6 ತಿಂಗಳೊಳಗೆ ಈ ಸದನದಲ್ಲಿ ಮಂಡಿಸಬೇಕೆನ್ನುವ ಮ್ಯಾಂಡೆಟರಿ ಇದೆ. ಏಕೆಂದರೆ ಎನ್‌ಕ್ವೈರಿ ಆಫ್ ಕಮೀಷನ್ ಆಕ್ಟ್ ಪ್ರಕಾರ 6 ತಿಂಗಳೊಳಗೆ ತಾವು ಆ ವರದಿಯನ್ನು ಸದನದಲ್ಲಿ ಮಂಡಿಸಬೇಕಾಗುತ್ತದೆ. ಈ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಮಾಡುವಂಥಾದ್ದು ಆಗಲಿ. ಆಮೇಲೆ ನಾವು ಈ ಬಗ್ಗೆ ಚಿಂತನೆ ಮಾಡಬಹುದು.

ಶ್ರೀ ಡಿ.ಬಿ.ಚಂದ್ರೇಗೌಡ: ಈ ಎರಡೂ ವಿಚಾರಗಳ ಬಗ್ಗೆ ನಾನು ಸರ್ಕಾರದ ವತಿಯಿಂದ ಸುವೊ-ಮೋಟೋ ಸ್ಟೇಟ್‌ಮೆಂಟ್ ಏನೂ ಮಾಡಲಿಲ್ಲ. ನಾನು ನಿಮ್ಮ ಜೊತೆಯಲ್ಲಿ ಚರ್ಚೆ ಮಾಡಿ ಈ ಅಭಿಪ್ರಾಯವನ್ನು ರೂಪಿಸಿ ಶಾಸನ ಸಭೆಗೆ

ಬಂದಿದ್ದುದು. ನಾನು ನಿಮಗೆ ಇನ್ನು ಯಾವ ರೀತಿ ಹೇಳಬೇಕು ಎಂದು ತಿಳಿಯಲಿಲ್ಲ. ನಾನು ಎರಡೂ ವಿಚಾರಗಳನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಮೊದಲನೆಯದು ನೀವು ವರದಿ ಸಭೆಯ ಮುಂದೆ ಇಡಬೇಕು ಎನ್ನುವಂಥಾದ್ದನ್ನು ನಾವು ಮಂತ್ರಿಮಂಡಲದ ಸಭೆಯಲ್ಲಿಟ್ಟು ಚರ್ಚೆ ಮಾಡಿ ತಮ್ಮೊಂದಿಗೂ ಚರ್ಚೆ ಮಾಡಿ ಈ ಅಧಿವೇಶನ ಮುಗಿಯುವುದರೊಳಗಾಗಿ ಇಡುತ್ತೇವೆ ಎನ್ನುವುದನ್ನು ಸ್ಪಷ್ಟೀಕರಣಗೊಳಿಸಿದ್ದೇವೆ. ಎರಡನೆಯ ವಿಚಾರದಲ್ಲಿ ತನಿಖೆಯ ಪ್ರೋಗ್ರೆಸ್ 90 ಪರ್ಸೆಂಟ್‌ಗಿಂತ ಹೆಚ್ಚು ಆಗಿದೆ ಈಗ ವಾಪಸ್ಸು ಬರುವುದಕ್ಕೆ ಸಾಧ್ಯವಿಲ್ಲ, ಅದರಿಂದ ಬಾಧಕವಾಗುತ್ತದೆ ಎನ್ನುವ ವಿಚಾರವನ್ನು ನಾನು ತಮ್ಮ ಗಮನಕ್ಕೆ ತಂದು, ಈ ಸದನ ಮುಗಿಯುವುದರೊಳಗೆ ಆ ವಿಷಯವನ್ನು ಸಹ ತೆಗೆದುಕೊಂಡು ನಾವು ನಿಮ್ಮ ಮುಂದೆ ಬರುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದ್ದೇನೆ. ಇದಕ್ಕಿಂತ ಸ್ಪಷ್ಟತೆಯನ್ನು ನಾನು ನಿಖರವಾಗಿ ತಾರೀಖು, ಗಂಟೆ ನಿಗದಿ ಮಾಡಿ ಹೇಳುವುದು ಕಷ್ಟವಾಗುತ್ತದೆ. ಈ ಅಧಿವೇಶನ ಮುಗಿಯುವುದರೊಳಗಾಗಿ ಎರಡೂ ವಿಚಾರಗಳನ್ನು ಪುನಃ ತಮ್ಮ ಮುಂದೆ ಬರುತ್ತವೆ. ದಯಮಾಡಿ ತಾವು ಇದನ್ನು ಒಪ್ಪಿಕೊಂಡು ಸರ್ಕಾರ ನಡೆಸುವವರಿಗೂ ಇನ್‌ವೆಸ್ಟಿಗೇಶನ್ ಮಾಡುವವರಿಗೂ ಇರತಕ್ಕಂಥ ತೊಂದರೆಗಳನ್ನು ತಾವು ಅರ್ಥ ಮಾಡಿಕೊಳ್ಳಿ. ನಾನು ಮಾನ್ಯ ನಾಯಕರ ಜೊತೆಯಲ್ಲಿ ಅಧ್ಯಕ್ಷರ ಕೊಠಡಿಯಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದೇನೆ. ಅಲ್ಲಿ ನಡೆದ ಚರ್ಚೆ ಮತ್ತು ಪರಿಸ್ಥಿತಿಯ ಪರಿಹಾರಕ್ಕಾಗಿ ನಮ್ಮ ಸನ್‌ಮಿತ್ರರಾದ ಪಿ.ಜಿ.ಆರ್.ಸಿಂಧ್ಯಾರವರು ಕೊಟ್ಟ ಸಲಹೆ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಚರ್ಚೆ ಮಾಡಿ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಆ ನಿರ್ಧಾರವನ್ನು ನಾನು ಇಲ್ಲಿ ಪ್ರಕಟ ಮಾಡಿದ್ದೇನೆ. ಇದರ ಮೇಲೆ ನಾನು ತಮಗೆ ಬಿಡುತ್ತೇನೆ. ನಾನು ಪುನಃ ಪುನಃ ಅದನ್ನೇ ಹೇಳಬೇಕಾಗುತ್ತದೆ. ಇದರಲ್ಲಿ ಪ್ರತಿಷ್ಠೆ ಏನು ಇದೆ. ಸತ್ಯ ಶೋಧನೆಯ ಕೆಲಸವಾಗಬೇಕಾಗಿದೆ. ಆದ್ದರಿಂದ ತಾವು ದಯಮಾಡಿ ಇದನ್ನು ಗಮನಿಸಿ ಸಭೆಯ ನಡವಳಿಕೆಗಳು ನಡೆಯುವುದಕ್ಕೆ ಅನುವು ಮಾಡಿಕೊಡಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರಾದಂತಹ ಚಂದ್ರೇಗೌಡರು ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿ ಆಯೋಗದ ವರದಿಯನ್ನು ಈ ಒಂದು ಅಧಿವೇಶನದ ಅವಧಿಯೊಳಗೆ ನಾವು ಮಂಡನೆ ಮಾಡುತ್ತೇವೆ ಎನ್ನತಕ್ಕಂಥ ಒಂದು ಸ್ಪಷ್ಟೀಕರಣ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಅವರು ಆ ಮಾತಿಗೆ ತಪ್ಪಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಹಿಂದೆ ಇಂತಹ ವಿಚಾರಗಳಲ್ಲಿ ಹೋರಾಟ ಆಗಿ ಮಂಡನೆ ಮಾಡುತ್ತೇವೆ ಎಂದು ಹೇಳಿ ತಪ್ಪಿಸಿಕೊಂಡಿರುವುದು ಆಗಿದೆ. ಆದರೆ ಈ ಸಲ ಆ ರೀತಿ ಆಗುವುದಿಲ್ಲ ಎನ್ನತಕ್ಕಂಥ ವಿಶ್ವಾಸವನ್ನು ನಾನು ಇಟ್ಟುಕೊಂಡಿದ್ದೇನೆ. ಇನ್ನು ಸಿ.ಬಿ.ಐ ತನಿಖೆಗೆ ನಾವು ಒತ್ತಾಯ

ಮಾಡಿಕೊಳ್ಳುತ್ತಲೇ ಬಂದಿದ್ದೇವೆ. ಇವತ್ತೂ ಒತ್ತಾಯ ಮಾಡುತ್ತಿದ್ದೇವೆ. ಏಕೆಂದರೆ ನನಗೆ ಇನ್ನೂ ಎಲ್ಲೋ ಒಂದು ಕಡೆ ಸಂಶಯ ಇದೆ. ಅನುಮಾನ ಇದೆ. ಈ ಸಿ.ಒ.ಡಿ. ತನಿಖೆಯ ಹಂತದಲ್ಲಿ ಇನ್‌ವೆಸ್ಟಿಗೇಶನ್ ಆಗಿ ಆರೋಪಿಗಳು ದೊಡ್ಡ ದೊಡ್ಡ ಕುಳಗಳು, ದೊಡ್ಡ ದೊಡ್ಡ ತಿಮಿಂಗಲಗಳು ಇವೆ. ಇದು ಯಾವ ಹಂತದಲ್ಲಿ ಹೋಗುತ್ತದೆಯೋ ಎನ್ನುವುದು. ಈಗ ಮಾನ್ಯ ಮಂತ್ರಿಗಳು ಅದಷ್ಟು ಬೇಗ ಅರೆಸ್ಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇನ್‌ವೆಸ್ಟಿಗೇಶನ್ ಅನ್ನು ನಾವು ಸಿ.ಒ.ಡಿಯಿಂದ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೂ ನಾವು ಇವತ್ತಿನವರೆಗೂ ಸಿ.ಬಿ.ಐ ತನಿಖೆಗೆ ಒತ್ತಾಯ ಮಾಡುತ್ತಿದ್ದೇವೆ. ಇದಕ್ಕೆ ಸರ್ಕಾರ ಒಪ್ಪುತ್ತಿಲ್ಲ. ಇದನ್ನು ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ಏಕೆಂದರೆ ಈ ಸದನದ ನಡವಳಿಕೆಗಳನ್ನು ಸ್ಟಾಲ್ ಮಾಡುವಂಥಾದ್ದು ನಮಗೂ ಬೇಕಾಗಿಲ್ಲ. ಏಕೆಂದರೆ ಈ ಸದನ ನಡೆಯಬೇಕು, ಹಲವಾರು ವಿಷಯಗಳ ಬಗ್ಗೆ ರಚನಾತ್ಮಕವಾದಂತಹ ನಡವಳಿಕೆಗಳು ನಡೆಯಬೇಕು, ಆದ್ದರಿಂದ ನಾವು ಸಿ.ಬಿ.ಐ ತನಿಖೆ ಆಗಲೇಬೇಕು ಎಂದು ಹಠಮಾಡಿಕೊಂಡು ಹೋಗುವುದಿಲ್ಲ. ಆದರೆ ಇವತ್ತೂ ನಮ್ಮ ಭಾವನೆ ಇದೆ. ಸಿ.ಬಿ.ಐ. ನಿಂದ ತನಿಖೆಯಾದರೆ ನಿಷ್ಪಕ್ಷಪಾತವಾದ ತನಿಖೆಯಾಗುತ್ತದೆಂದು. ನಿಜವಾಗಿ ಯಾರು ಆರೋಪಿಗಳು ಇದ್ದಾರೆ ಅವರು ಹೊರಗೆ ಬರುತ್ತಾರೆಂದು, ಅದಕ್ಕೆ ಸರ್ಕಾರ ಒಪ್ಪುತ್ತಿಲ್ಲ, ಅದನ್ನು ನಾವು ಪ್ರತಿಭಟನೆ ಮಾಡಿ, ಈ ಸದನದ ನಡವಳಿಕೆಗಳು ಸರಿಯಾಗಿ ನಡೆದುಕೊಂಡು ಹೋಗಲು ಸಹಕಾರ ಕೊಡುವ ದೃಷ್ಟಿಯಿಂದ ನಾವು ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷದ ಶಾಸಕರು ಸಭಾತ್ಯಾಗ ಮಾಡಿದರು)

12.30 ಪಿ.ಎಂ

ಅಧ್ಯಕ್ಷರು: ಈಗ ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ. ಈ ಸಭೆಗೆ ಸರಕಾರದವರು ನಾಮಕರಣ ಮಾಡಿದಂಥ ರೋಜರ್ ಮೈಕೇಲ್ ಬಿನ್ನಿ - ಇವರು ಪ್ರಮಾಣ ವಚನ ಸ್ವೀಕಾರ ಮಾಡುತ್ತಾರೆ.